ಸಾಕ್ಷಿಯನ್ನು ದಿನಾಂಕ 15-06-2023 ರಂದು ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಸಿ ವಿ ಆರ್ ವಕೀಲರಿಂದಃ**

ಖರೀದಿ ಪತ್ರದ ನೊಂದಣಿ ನಂಬರನ್ನು ನಾನು ದಾವಾ ಪತ್ರದಲ್ಲಿ ದಾವೆ ದಾಖಲಿಸುವ ಸಮಯ ನಮಾದಿಸಿರಲಿಲ್ಲ ಎಂದರೆ ಸರಿಯಲ್ಲ. ಹಾಗಿದ್ದಲ್ಲಿ ಇತ್ತೀಚೆಗೆ ದಾವಾ ಪತ್ರದ ತಿದ್ದುಪಡಿ ಮಾಡಲು ನ್ಯಾಯಾಲಯದ ಅನುಮತಿಯನ್ನು ಯಾಕೆ ಕೇಳಿದ್ದು ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಸಾಕ್ಷಿ ಪುನಃ ನುಡಿಯುತ್ತಾರೆ ತಿದ್ದುಪಡಿ ಮಾಡಿಲ್ಲ. ಪ್ರತಿವಾದಿ ನಂ.1 ರಿಂದ 9 ರವರು ಸಾಲದ ಕುರಿತು ಭದ್ರತೆಗಾಗಿ ಬರೆದುಕೊಟ್ಟ ದಾಖಲೆಯ ಮೇಲೆ ನಾನು ದಾವೆಯನ್ನು ದಾಖಲಿಸಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅದು ಸಾಲದ ಪತ್ರ ಅಲ್ಲ. ಮುಂಗಡ ಹಣ ಮರುಪಾವತಿಗೆ ಆದೇಶಿಸಬೇಕು ಎಂದು ಇತ್ತೀಚೆಗೆ ದಾವಾ ಪತ್ರದಲ್ಲಿ ತಿದ್ದುಪಡಿ ಮಾಡಿ ಮಾಗಣೆ ಮಾಡಿದ ಕುರಿತಂತೆ ದಾವೆ ದಾಖಲಿಸುವ ಕಾಲಕ್ಕೆನೆ ಸದರಿ ದುಡ್ಡು ಎಲ್ಲ ನನಗೆ ಮರುಪಾವತಿ ಅಗಿದ್ದ ಕಾರಣದಿಂದಲೇ ಅದನ್ನು ವಾಪಸ ಕೊಡಿಸಬೇಕೆಂದು ಮಾಗಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರಿಂದ 9 ರವರು ನನಗೆ ಪಾವತಿಸತಕ್ಕಂತಹ ಯಾವುದೇ ರೊಕ್ಕ ಇಲ್ಲ ಎಂದರೆ ಸರಿಯಲ್ಲ. ದುಡ್ಡು ವಾಪಸ ಬಂದಿದ್ದರೂ ಕೂಡ ಬಂದಿಲಲ್ಲ ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರ ಯಾವತ್ತೂ ಕೂಡ ಬರೆದುಕೊಟ್ಟಿಲ್ಲ ಹಾಗೂ ಮಾರಾಟ ಮಾಡಲು ಯಾವತ್ತೂ ಕೂಡ ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಖರೀದಿ ವ್ಯವಹಾರವೇ ಆಗಿರುತ್ತೆ ಹಾಗೂ ದಾಖಲೆ ಹಾಜರಪಡಿಸಲಾಗಿದೆ. ಅದರಲ್ಲಿ 1 ರಿಂದ 9 ನೇ ಪ್ರತಿವಾದಿಯರ ಎಲ್ಲರ ಸಹಿ ಸದರಿ ದಾಖಲೆಯಲ್ಲಿ ಇಲ್ಲ ಎಂದರೆ ಇಬ್ಬರು ಪ್ರತಿವಾದಿಯರ ಸಹಿ ಅದರಲ್ಲಿ ಇಲ್ಲ ಹಾಗು ಅವರ ಸಹಿಯನ್ನು ಮಾಡಿಸಿಕೊಡುತ್ತೇವೆ ಎಂದು ಇತರೆ ಪ್ರತಿವಾದಿಗಳು ಅಂದರೆ ಖರೀದಿ ಕರಾರುಪತ್ರಕ್ಕೆ ಸಹಿ ಮಾಡಿದವರು ಒಪ್ಪಿಕೊಂಡಿದ್ದರು ಎಂದು ನುಡಿಯುತ್ತೇನೆ. ಸದರಿ ದಾಖಲೆ ಮೇಲೆ ಯಾವುದೇ ಸಾಕ್ಷಿದಾರರ ಸಹಿ ಇಲ್ಲ ಎಂದರೆ ಎಸ್ ವಿ ಜೋಶಿ ವಕೀಲರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತೇನೆ. ಎಸ್ ವಿ ಜೋಶಿರವರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿದಿದ್ದಾರೆ ಎಂದರೆ ನಿಜ. ಅವರು ದಸ್ತು

ಬರಹಗಾರರಾಗಿ ಸದರಿ ದಾಖಲೆ ಕುರಿತಂತೆ ಸಾಕ್ಷಿ ಹೇಳಲು ಬಂದಿರುವುದು ಹೊರುತು ಸಾಕ್ಷಿಯಾಗಿ ಸಾಕ್ಷಿ ಹೇಳಲು ಬಂದಿದ್ದು ಅಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲು : 13 ನೇ ಪ್ರತಿವಾದಿ ಪರ ಶ್ರೀಮತಿ ಜೆ ಪಿ ಡಿ ವಕೀಲರಿಂದಃ**

ನನ್ನ ಮುಂದುವರೆದ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಈ ಹಿಂದೆ ಕೂಡ ನನ್ನ ಸಾಕ್ಷಿ ಹೇಳಿಕೆ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿದ್ದೆ ಎಂದರೆ ನಿಜ. ದಾವೆಯ ಸಂಪೂರ್ಣ ಮಾಹಿತಿ ನನಗೆ ಇದೆ ಎಂದರೆ ನಿಜ. ಈ ದಾವೆಯಲ್ಲಿ ಏನು ಮಾಗಣಿ ಮಾಡಿದ್ದೇನೆ ಎಂದು ಕೇಳಿದರೆ ನಾವು ಪ್ರತಿವಾದಿ ಜಿ ಪಿ ಎ ಹೋಲ್ಡರ್ ಜ್ಯೋತಿಬಾ ಬೆನಕಟ್ಟಿರವರ ಜೊತೆ ಖರೀದಿ ಸಂಚಕಾರ ಪತ್ರ ಮಾಡಿಕೊಂಡಿದ್ದೇವು ಹಾಗೂ ಅವಾಗ ಆ ಸ್ವತ್ತಿನ ಕುರಿತಂತೆ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿತ್ತು ಹಾಗೂ ಅಧ್ಯಾಪಕ ನಗರ ಕೋಆಪರೇಟಿವ್ ಸೊಸೈಟಿ ರವರು ಆ ಕೇಸ್ ದಾಖಲಿಸಿದ್ದರು ಹಾಗೂ ಆ ಕೇಸ್ ನಿಕಾಲಿಯಾದ ಮೇಲೆ ನಮಗೆ ಖರೀದಿ ಪತ್ರ ಬರೆದುಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದರು ಹಾಗೂ ಅವಾಗ ಬಾಕಿ ಹಣ ನಾನು ಕೊಡಬೇಕಾಗಿತ್ತು ಹಾಗೂ ಆ ಕೇಸ್ ನಿಕಾಲಿಯಾಗಿದ್ದನ್ನು ಜ್ಯೋತಿಬಾ ಬೆನಕಟ್ಟಿರವರ ನಮಗೆ ತಿಳಿಸಿಲ್ಲ ಆದರೆ ಯಾರದೋ ಕಡೆಯಿಂದ ಆ ವಿಚಾರ ನಮಗೆ ಗೊತ್ತಾಯಿತು ಹಾಗೂ ಅಷ್ಟರಲ್ಲಿ ಸಿ ವಿ ರೆಟ್ಟಿಹಳ್ಳಿ ವಕೀಲರು ಜ್ಯೋತಿಬಾ ಬೆನಕಟ್ಟಿರವರಿಂದ ಬೇರೆ ಪಾವರ್ ಆಫ್ ಅಟಾರ್ನಿ ಬರೆಸಿಕೊಂಡು ನಮಗೆ ಗೊತ್ತಾಗದಂತೆ ಮೋಸ ಮಾಡಿ ಬೇರೆಯವರಿಗೆ ಖರೀದಿ ಪತ್ರ ಬರೆಸಿಕೊಟ್ಟರು ಹಾಗೂ ಅದು ನಮಗೆ ಗೊತ್ತಾದ ನಂತರ ವಕೀಲರ ನೋಟಿಸ್ ಕೊಟ್ಟೆವು ಹಾಗೂ ಅರ್ಚನಾ ಶಹಾ ರವರು ಅದರ ಖರೀದಿದಾರರು ಎಂದು ನಮಗೆ ಗೊತ್ತಾದ ತಕ್ಷಣ ನ್ಯಾಯಾಲಯಕ್ಕೆ ಬಂದು ನಮಗೆ ನ್ಯಾಯ ಕೊಡಿಸಬೇಕು ಎಂದು ಕೇಳಿದ್ದು ಎಂದು ನುಡಿಯುತ್ತೇನೆ. ಪ್ರತಿವಾದಿ ನಂ.10 ರಿಂದ 13 ರವರು ಸದರಿ ಸ್ವತ್ತನ್ನು ಖರೀದಿ ಹಿಡಿದವರು ಆಗಿರುತ್ತಾರೆ. ದಾವಾ ಪತ್ರದಲ್ಲಿ ಕೇಳಿರುವ ಪರಿಹಾರದಲ್ಲಿ ಕೇವಲ ಎರೆಡು ಖರೀದಿ ಪತ್ರದ ಕುರಿತಂತೆ ಮಾತ್ರ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾಲ್ಕು ಖರೀದಿ ಪತ್ರದ ಬಗ್ಗೆ ಹೇಳಿದ್ದೇವೆ. ದಾವೆ ದಾಖಲಿಸುವ ಸಮಯ ಎರಡು ಖರೀದಿ ಪತ್ರದ ಕುರಿತಂತೆ ಮಾತ್ರ ನಮೂದಿಸಿದ್ದು ಎಂದರೆ

ನಿಜ. ಆ ಖರೀದಿ ಪತ್ರದ ಎಲ್ಲ ವಿವರವನ್ನು ಅಂದರೆ ನೊಂದಣಿ ಸಂಖ್ಯೆ, ದಿನಾಂಕ ಎಲ್ಲವನ್ನು ಕೂಡ ನಮೂದಿಸಿದ್ದೇನೆ ಎಂದರೆ ನಿಜ. ಆ ವಿವರವನ್ನು ನನಗೆ ಯಾರು ತಿಳಿಸಿದ್ದು ಎಂದು ಕೇಳಿದರೆ ದಾಖಲೆ ಪಡೆದುಕೊಂಡಾಗ ಗೊತ್ತಾಯಿತು ಎಂದು ನುಡಿಯುತ್ತೇನೆ. ತಿದ್ದುಪಡಿ ಮಾಡಿ ದಾವಾ ಪತ್ರದಲ್ಲಿ ಇನ್ನೂ ಎರೆಡು ಪತ್ರದ ಕುರಿತಂತೆ ಇತ್ತೀಚೆಗೆ ಸೇರಿಸಿದ್ದು ಎಂದರೆ ನಿಜ. ಸದರಿ 2 ಪತ್ರಗಳು ನೊಂದಾಯಿತ ದಾಖಲೆಗಳು ಎಂದರೆ ನಿಜ. ಅವುಗಳ ಬಗ್ಗೆ ಮಾಹಿತಿ 2003 ರಲ್ಲಿ ನನಗೆ ಯಾಕೆ ಸಿಗಲಿಲ್ಲ ಎಂದು ಕೇಳಿದರೆ ಮಾಹಿತಿ ಸಿಕ್ಕಿತ್ತು ಆದರೆ ನಾವು ಹಾಜರಪಡಿಸಿರಲಿಲ್ಲ ಮತ್ತು ಲೇಟಾಗಿ ಹಾಜರಪಡಿಸಿದ್ದು ಎಂದು ನುಡಿಯುತ್ತೇನೆ. ಸದರಿ ಎರೆಡು ಖರೀದಿ ಪತ್ರಗಳ ಬಗ್ಗೆ ಮೂಲ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ಜ್ಯೋತಿಬಾ ಬೆನಕಟ್ಟಿರವರು ಯಾರಿಂದ ಜಿಪಿಎ ಪಡೆದುಕೊಂಡಿದ್ದು ಎಂದು ಕೇಳಿದರೆ ಅವರ ಕುಟುಂಬದ ಸದಸ್ಯರಿಂದ ಎಂದು ನುಡಿಯುತ್ತೇನೆ. ಸಾಕ್ಷಿ ಪುನಃ ನುಡಿಯುತ್ತಾರೆ ಜ್ಯೋತಿಬಾ ಬೆನಕಟ್ಟಿರವರ ತಂದೆ ಕೃಷ್ಣಪ್ಪ ಬೆನಕಟ್ಟಿರವರು ಪಾವರ್ ಆಫ್ ಅಟಾರ್ನಿ ಕೊಟ್ಟಿದ್ದು. ಕೃಷ್ಣಪ್ಪ ಬೆನಕಟ್ಟಿಹೊರತು ಬೇರೆ ಯಾರೂ ಜಿಪಿಎ ಕೊಟ್ಟಿರಲಿಲ್ಲವೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. ಸದರಿ ಜಿಪಿಎ ನೊಂದ ಆಗಿತ್ತೇ ಎಂದು ಕೇಳಿದರೆ ಆಗಿತ್ತು ಎಂದು ನುಡಿಯುತ್ತೇನೆ. ಸದರಿ ನೊಂದ ಜಿಪಿಎ ಪತ್ರವನ್ನು ಹಾಜರಪಡಿಸಿದ್ದೇನೆಯೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಅದು ನನ್ನ ಪರ ನಿಶಾನೀಕರಿಸಿದ ದಾಖಲೆಗಳ ಪೈಕಿ ಎಲ್ಲಿ ಇದೆ ಎಂದು ತೋರಿಸಲು ಆಗುತ್ತದೆಯೇ ಎಂದು ಕೇಳಿದರೆ ಅದು ನಿಪಿ.22 ಆಗಿದೆ ಎಂದು ನುಡಿಯುತ್ತೇನೆ. ಅದು ನನಗೆ ಬರೆದುಕೊಟ್ಟಿರುವ ಜೆಪಿಎ ಪತ್ರ ಎಂದರೆ ನಿಜ. ಕೃಷ್ಣಪ್ಪ ಬೆನಕಟ್ಟಿರವರು ಜ್ಯೋತಿಬಾ ಬೆಕಟ್ಟಿರವರಿಗೆ ಬರೆದುಕೊಟ್ಟಿರುವ ಜಿಪಿಎ ಪತ್ರದ ಬಗ್ಗೆ ಪ್ರಶ್ನೆ ಕೇಳಿದ್ದು ಹಾಗೂ ಅದು ಎಲ್ಲಿದೆ ಎಂದು ತೋರಿಸಿ ಎಂದು ಕೇಳಿದ್ದು ಎಂದು ಪ್ರಶ್ನೀಸಿದರೆ ಆ ಜಿಪಿಎ ನಮಗೆ ಸಂಬಂಧಪಡುವುದಿಲ್ಲ ಎಂದು ನುಡಿಯುತ್ತೇನೆ. ಆ ಜಿಪಿಎ ಪ್ರಕಾರ ನಿಪಿ.21 ಮತ್ತು 22 ನ್ನು ನಾವು ಮಾಡಿಕೊಂಡಿದ್ದು ಎಂದರೆ ನಿಜ. 9 ಜನ ಸೇರಿ ನನಗೆ ಒಟ್ಟು ಮೊಕ್ತಿಯಾರ ಪತ್ರವನ್ನು ಕೊಟ್ಟಿದ್ದು ಎಂದರೆ ನನಗೆ ಹಾಗೂ ಜಗದೀಶ ಕಲ್ಯಾಣ ಶೆಟ್ಟಿರವರಿಗೆ ಕೊಟ್ಟಿದ್ದು ಎಂದು

ನುಡಿಯುತ್ತೇನೆ. ಸುಭದ್ರಾ ಅಶೋಕ ಮೋಟೆ ರವರ ಪರವಾಗಿ ಜ್ಯೋತಿಬಾ ಬೆನಕಟ್ಟಿರವರು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅವರ ಸಹಿ ಮಾಡಬೇಕಾದ ಕಡೆ ಯಾವುದೇ ಸಹಿ ಇಲ್ಲ ಹಾಗೂ ಆನಂತರ ಆ ಸಹಿ ಮಾಡಿಸಿಕೊಡುವುದಾಗಿ ಆವತ್ತು ಹೇಳಿದ್ದರು. ಆನತಂರ ಅವರ ಸಹಿಯನ್ನು ಮಾಡಿಸಿಕೊಟ್ಟಿದ್ದಾರೆಯೇ ಎಂದು ಕೇಳಿದರೆ ನ್ಯಾಯಾಲಯ ದಲ್ಲಿ ಕೇಸ್ ನಡೆಯುತ್ತಿತ್ತು ಹಾಗೂ ಅವಾಗ ವಿಶ್ವಾಸ ಇತ್ತು ಹಾಗೂ ಆದ್ದರಿಂದ ಹಾಗೆಯೇ ಮುಂದುವರೆಯಿತು ಎಂದು ನುಡಿಯುತ್ತೇನೆ. ಜ್ಯೋತಿಬಾ ಬೆನಕಟ್ಟಿರವರರ ತಂದೆ ಕೃಷ್ಣಪ್ಪ ಬೆನಕಟ್ಟಿವರು ಅಧ್ಯಾಪಕ ನಗರ ಕೋ ಆಪರೇಟಿವ್ ಸೊಸೈಟಿಯಿಂದ ಸೊಸೈಟಿಗೆ ಸೇಲ್ ಅಗ್ರಿಮೆಂಟ್ ಹಾಗೂ ಪಾವರ್ ಆಫ್ ಅಟಾರ್ನಿ ಬರೆದುಕೊಟ್ಟಿದ್ದಾರೆ ಹಾಗೂ ಜಮೀನನ್ನು ಎನ್ ಎ ಮಾಡಿಸಿಬಿಟ್ಟು 2 ವರ್ಷದೊಳಗಡೆ ಪೂರ್ತಿ ವ್ಯವಹಾರವನ್ನು ಮುಗಿಸಿಕೊಡಬೇಕೆಂದು ಕರಾರು ಮಾಡಿಕೊಂಡಿದ್ದರು ಹಾಗೂ ಕೃಷ್ಣಪ್ಪ ಬೆನಕಟ್ಟಿರವರು 2 ವರ್ಷದೊಳಗೆ ವ್ಯವಹಾರವನ್ನು ಮುಗಿಸಿಕೊಳ್ಳಲಿಲ್ಲವಾದ್ದರಿಂದ ಹಾಗೂ 6 ತಿಂಗಳ ನಂತರ ಪಾವರ್ ಆಫ್ ಅಟಾರ್ನಿ ಕ್ಯಾನ್ಸಲ್ ಮಾಡಿದ್ದರಿಂದ ಅಧ್ಯಾಪಕ ನಗರ ಕೋ ಆಪರೇಟಿವ್ ಸೊಸೈಟಿಯವರು ನ್ಯಾಯಾಲಯಕ್ಕೆ ಹೋಗಿದ್ದರು ಹಾಗೂ ಆ ಕೇಸಿನ ಬಗ್ಗೆ ನಮಗೆ ಗೊತ್ತಿತ್ತು ಹಾಗೂ ಕೃಷ್ಣಪ್ಪ ಬೆನಕಟ್ಟಿರವರ ಪರ ಜ್ಯೋತಿಬಾ ಬೆನಕಟ್ಟಿರವರು ಬಂದು ನಮ್ಮ ಬಳಿ ವ್ಯವಹಾರ ಮಾತನಾಡಿ ಸದರಿ ಸೊಸೈಟಿ ಜೊತೆ ಮಾಡಿಕೊಂಡ ಕರಾರಿನ ಅವಧಿ ಮುಗಿದಿದೆ ಹಾಗೂ ಪಾವರ್ ಆಫ್ ಅಟಾರ್ನಿ ರದ್ದು ಮಾಡಲಾಗಿದೆ ಹಾಗೂ ಈ ಜಮೀನು ಕುರಿತು ನಮ್ಮ ಜೊತೆ ವ್ಯವಹಾರ ಮಾಡುವುದಾಗಿ ಕೇಳಿದಾಗ ನಾವು ಮಾತುಕತೆ ಮಾಡಿದ್ದು ಎಂದು ನುಡಿಯುತ್ತೇನೆ.

**ಮುಂದುವರೆದ ಪಾಟಿ ಸವಾಲಿಗೆ** ಕಾಲಾವಕಾಶ **ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.